# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಮುರ್ತುಜಾ ಹುಸೇನಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಯರಗೇರಾ ಗ್ರಾಮ ಪಂಚಾಯಿತಿ, ರಾಯಚೂರು ತಾಲೂಕು, ರಾಯಚೂರು ಜಿಲ್ಲೆ ಹಾಗೂ ಶ್ರೀ ಶರಣೆಗೌಡ, ಕಿರಿಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು ತಾಲೂಕು, ರಾಯಚೂರು ಜಿಲ್ಲೆ ಇವರ ವಿರುದ್ಧ ನಡೆಸಲಾದ ಇಲಾಖಾ ವಿಚಾರಣೆ–ಅಂತಿಮ ಆದೇಶ ಹೊರಡಿಸುವ ಬಗ್ಗೆ–ಆದೇಶ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/221/ಗ್ರಾಪಂಕಾ/2014 ದಿನಾಂಕ:10.06.2014.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ: LOK/INQ/14-A/360/2014/ARE-1 Date:30.05.2017.
3. ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ LOK/INQ/14-A/360/2014/ARE-1 Date:27.06.2017.
4. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ/560/ಗ್ರಾಪಂಕಾ/2017 ದಿನಾಂಕ:25.07.2017, 11.09.2017
5. ಶ್ರೀ ಮುರ್ತುಜಾ ಹುಸೇನಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ: 09.08.2017.
6. ಶ್ರೀ ಶರಣೆಗೌಡ, ಕಿರಿಯ ಅಭಿಯಂತರರು ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ: 20.04.2018.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ: (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಮುರ್ತುಜಾ ಹುಸೇನಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಯರಗೇರಾ ಗ್ರಾಮ ಪಂಚಾಯಿತಿ, ರಾಯಚೂರು ತಾಲೂಕು, ರಾಯಚೂರು ಜಿಲ್ಲೆ ಹಾಗೂ ಶ್ರೀ ಶರಣೆಗೌಡ, ಕಿರಿಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು ತಾಲೂಕು, ರಾಯಚೂರು ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 14–ಎ ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು. ಅದರಂತೆ ನಿಬಂಧಕರು ವಿಚಾರಣೆಗಳು–1, ಕರ್ನಾಟಕ ಲೋಕಾಯುಕ್ತ ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

"ದೋಷಾರೋಪಣೆ"

While you the DGO No.1 Sri.Murthuja Hussaini, working as PDO, Yeregera Grama Panchayath, along with President of the Yeregera Grama Panchayath Smt. Rehna Begam, has passed the bill and made payments of the bill to the full works without verifying whether the works in respect of construction of protection walls in SC/ST wards of Yeregera village under Mahathma Gandhi National Rural Employment Guarantee scheme for the year2011, were executed according to the specification mentioned in the estimate and the M.B Book and misappropriated the amount causing loss to th Government. Thereby you DGO.1 had failed to maintain absolute integrity and devotion to duty and committed an act which is unbecoming of a Government Servant and you are guilty of misconduct under Rule.3(1)(i) to (iii) of KCS (Conduct) Rules 1966.

ವಿಚಾರಣಾಧಿಕಾರಿಗಳು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ವರದಿಯಲ್ಲಿ ಶ್ರೀ ಮುರ್ತುಜಾ ಹುಸೇನಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಯರಗೇರಾ ಗ್ರಾಮ ಪಂಚಾಯಿತಿ ಹಾಗೂ ಶ್ರೀ ಶರಣೆಗೌಡ, ಕಿರಿಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು ತಾಲೂಕು, ಇವರ ವಿರುದ್ಧದ ಆರೋಪವು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ.

ಉಪಲೋಕಾಯುಕ್ತರು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ವರದಿಯಲ್ಲಿ ಸದರಿಯವರು ಯರಗೇರಾ ಗ್ರಾಮ ಪಂಚಾಯಿತಿಯ 2011ನೇ ಸಾಲಿನ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಎಸ್.ಸಿ/ಎಸ್.ಟಿ ವಾರ್ಡಿನಲ್ಲಿ ಕೈಗೊಂಡ ತಡೆಗೋಡೆ ಕಾಮಗಾರಿಯಲ್ಲಿ ಅವ್ಯವಹಾರ ಎಸಗಿದ ಆರೋಪವು ಸಾಬೀತಾಗಿರುವುದರಿಂದ ಶ್ರೀ ಮುರ್ತುಜಾ ಹುಸೇನಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ರವರು ದಿನಾಂಕ:30.06.2014 ರಂದು ಸೇವೆಯಿಂದ ವಯೋನಿವೃತ್ತಿ ಹೊಂದಿರುವುದರಿಂದ ಇವರಿಗೆ ನಿವೃತ್ತಿ ವೇತನದ ಶೇಕಡ 30 ರಷ್ಟನ್ನು ಐದು ವರ್ಷದ ಅವಧಿಗೆ ಕಡಿತಗೊಳಿಸುವ ಹಾಗೂ ಶ್ರೀ ಶರಣೆಗೌಡ, ಕಿರಿಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು ತಾಲೂಕು ರವರಿಗೆ ಐದು ವಾರ್ಷಿಕ ವೇತನ ಬಡ್ತಿಗಳನ್ನು ಐದು ವರ್ಷಗಳ ಅವಧಿಗೆ ಸಂಚಿತ ಪರಿಣಾಮವಿಲ್ಲದೆ ತಡೆಹಿಡಿಯುವ ದಂಡನೆಯನ್ನು ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ, ಈ ಸಂಬಂಧ ಶ್ರೀ ಮುರ್ತುಜಾ ಹುಸೇನಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಯರಗೇರಾ ಗ್ರಾಮ ಪಂಚಾಯಿತಿ ಹಾಗೂ ಶ್ರೀ ಶರಣೆಗೌಡ, ಕಿರಿಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು ತಾಲೂಕು ರವರಿಗೆ ನಿಯಮಾನುಸಾರ ಸರ್ಕಾರದ ಪತ್ರದಲ್ಲಿ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ ಎರಡನೇ ಕಾರಣ ಕೇಳುವ ನೋಟೀಸ್ಸನ್ನು ಜಾರಿಗೊಳಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5) ರಲ್ಲಿ ಎರಡನೇ ಕಾರಣ ಕೇಳುವ ನೋಟೀಸ್ಸಿಗೆ, ಶ್ರೀ ಮುರ್ತುಜಾ ಹುಸೇನಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಯರಗೇರಾ ಗ್ರಾಮ ಪಂಚಾಯಿತಿ ರವರು ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು ಈ ಕೆಳಕಂಡಂತೆ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

ಸದರಿಯವರಿಗೆ ಇರುವ ವಿಶ್ರಾಂತಿ ವೇತನ ಬಹಳ ಕಡಿಮೆ ಇದ್ದು ಅದರಲ್ಲಿ ಶೇ.30% ಕಡಿತಗೊಳಿಸಿದರೆ ತುಂಬಾ ಕಡಿಮೆಯಾಗುತ್ತದೆ. ಅದರಲ್ಲಿ ಇವರಿಗೆ 4 ಜನ ಮಕ್ಕಳು ಇದ್ದು, ದೈನಂದಿನ ಖರ್ಚುವೆಚ್ಚಗಳನ್ನು ಭರಿಸಲು ಬಹಳ ಆರ್ಥಿಕ ತೊಂದರೆಯಾಗುವುದಾಗಿ ಕಡಿತದ ಮೊತ್ತವನ್ನು ಶೇ.30% ರಿಂದ 10%ಕ್ಕೆ ಮತ್ತು ಇದಿದ್ದನ್ನು 02 ವರ್ಷಕ್ಕೆ ಮರುನಿಗಧಿಪಡಿಸಿ ಅನುಕೂಲ ಮಾಡಿಕೊಡಬೇಕೆಂದು ವಿನಂತಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (6) ರಲ್ಲಿ, ಎರಡನೇ ಕಾರಣ ಕೇಳುವ ನೋಟೀಸ್ಸಿಗೆ, ಶ್ರೀ ಶರಣೆಗೌಡ, ಕಿರಿಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು ತಾಲೂಕು ಅವರು ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು ಈ ಕೆಳಕಂಡಂತೆ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

ಸದರಿಯವರು ಕಿರಿಯ ಇಂಜಿನಿಯರ್ ಆಗಿ ಪಂಚಾಯತ್‌ರಾಜ್ ಇಂಜಿನೀಯರಿಂಗ್ ಉಪ ವಿಭಾಗ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇವರಿಗೆ ಯರಗೇರಾ ಗ್ರಾಮ ಪಂಚಾಯತ್ ಪ್ರಭಾವ ವಹಿಸಲಾಗಿ, ಯರಗೇರಾದಲ್ಲಿ ಎಸ್.ಸಿ/ಎಸ್.ಟಿ ತಡೆಗೋಡೆಯ ನಿರ್ಮಾಣ ಕಾಮಗಾರಿ ತೃಪ್ತಿಕರವಾಗಿರುತ್ತದೆ. ಸದರಿ ಗ್ರಾಮ ಪಂಚಾಯತ್‌ದಲ್ಲಿ ರಾಜಕೀಯ ಒತ್ತಡದಿಂದ ದೂರು ದಾಖಲಿಸಿದ್ದು, ಸದರಿ ಕಾಮಗಾರಿಯು ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ನಿರ್ವಹಿಸಿದ್ದು, ಕೂಲಿ ಕಾರ್ಮಿಕರ ಹಣವನ್ನು ಕೂಲಿ ಕಾರ್ಮಿಕರ ಖಾತೆಯಲ್ಲಿ ಜಮಾ ಮಾಡಲಾಗಿದ್ದು, ಸಾಮಾಗ್ರಿಗಳ ಸಾರಿಗೆ ವೆಚ್ಚವನ್ನು ಸಂಬಂಧಪಟ್ಟವರಿಗೆ ಪಾವತಿಸಲಾಗಿರುತ್ತದೆಂದು, ಸದರಿಯವರು ಸುಮಾರು ದಿನದಿಂದ ಅನಾರೋಗ್ಯದಿಂದ ಬಳಲುತ್ತಿರುವುದಾಗಿ ತಿಳಿಸಿರುತ್ತಾರೆ.

ಸದರಿಯವರುಗಳು ಸರ್ಕಾರಕ್ಕೆ ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಒಪ್ಪಲು ಬರುವುದಿಲ್ಲವಾಗಿರುತ್ತದೆ. ವಿಚಾರಣಾಧಿಕಾರಿಗಳು ತಮ್ಮ ವರದಿಯಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತಾರೆ.

In this case the evidence given by PW-1 and 2 and documents produced and marked as Ex.P1 to Ex.P10 makes it abundantly clear that DGOs 1 and 2 worked as PDO of Yaragere Grama Panchayath and Junior Engineer, PRE Sub Division, Raichur District, respectively, and the work of construction of protection wall in SC and ST wards of Yaragere village was undertaken during year 2011 under MGNREG scheme at the estimated cost of Rs. 1,50,000/- and the wall was constructed under the

supervision of DGO NO.2. It is the specific case of the disciplinary authority that the amount sanctioned for the work was paid to the concerned. It is stated that the DGO NO.2, being the PDO of Yaragere Grama Panchayath, has made payment of the amount of concerned persons even though the complainant had raised objection regarding the improper execution of the works. It is significant to note that the DGOs have not disputed the fact of construction of protection wall in wall in SC and ST wards of Yaragere village under MGNREG scheme during year 2011. Ex.P.7 is the estimate prepared for the said work. In the written statement filed by the DGOs in this case also they have not disputed the fact that protection wall was constructed during year 2011. Ex.P.7 is the estimate prepared for the said work. In the written statement filed by the DGOs in this case also, they have not disputed the fact that protection wall was constructed during year 2011 in SC ST ward of Yaragere village. The DGOs have contended in their written statement that the work was executed as per the estimate following rules and there is no irregularities in executing the work. It is significant to note that DGOs in their written statement have stated that since investigating officer visited the place of work 4 years after the work was executed, the height of the protection wall was reduced due to rain and in some places it was washed away and therefore there was difference in length and height of the wall. This stand taken by the DGOs in their written statement support the say of the investigating officer, who is examined as PW-1, that there was considerable difference in the measurement of the protection wall found at the time of inspection to the measurement of the protection wall found at the time of inspection to the measurement mentioned in the estimate and the portion of the wall had shrunk due to rain. If really the portion of the protection wall was washed away in the rain, as contended by the DGOs, then same should have been visible even now. The claim of DGOs that the height of the protection wall is shrunk due to rain cannot be accepted as there is no evidence to support the said contention. In view of the admission made by the DGO regarding the discrepancy in the measurement of length, height and breadth of the protection wall in their written statement, support to the evidence given by PW-1. Therefore the oral evidence given by PW-1 regarding the irregularities found in construction of protection wall in SC and ST wards of Yaragere village can be safely believed. No doubt complainant is a politician, as it is evident from complaint given by him in the letterhead of a political party, but his evidence is supported by the evidence of PW-2, who is an independent witness and had conducted investigation on the orders of CEO Zilla Panchyath Raichur. As pointed out supra DGOs in their written statement filed in the case in the initial stage of the enquiry have clearly admitted that the length, height and breadth of the protection wall was less than the length, height and breadth mentioned in the estimate. DGOs have not produced any evidence on record to show that the PW-2 was having reason to falsely implicate them in his report. PW-2 is also an officer of government and he had conducted investigation only after Chief Executive Officer of Zilla Panchayath had directed him to do so. Therefore no motive can be attribute to PW-2 for implicating the DGOs in this report. After careful scrutiny of the oral evidence of PW-1 and 2 and also documents produced in the case, I am of the view that DGO NO.2 who was the Junior Engineer of PRE Division of Raichur Zilla Panchayath, did not supervise the work properly and he has committed serious irregularity in not executing the work according to the estimate and also he did not record measurement of the work before recommending payment and further DGO No.1, who was the PDO of Yaragere Grama Panchayath, had made payment of the

amount sanctioned for the work even though the work was not executed according to the estimate and further no measurement book was furnished to him for making payment.

After examining the evidence produced by the disciplinary authority in the case, I am of the view that the disciplinary authority has clearly proved the allegations made against DGOs NO 1 and 2 and hence I hold that the DGOs No.1 and 2, while executing the work of construction of protection wall at SC/ST ward of Yaragere village have committed irregularities and without constructing the wall according to the estimate they had made payment of the amount sanctioned for the said purpose and therefore, both DGOs have committed grave official misconduct, as defined under Rule 3 (i) to (iii) of the KCS (conduct) Rules 1957 and hence have answered the point formulated above in the AFFIRMATIVE and proceed to pass the following order.

ಸರ್ಕಾರವು ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, ಶ್ರೀ ಮುರ್ತುಜಾ ಹುಸೇನಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಯರಗೇರಾ ಗ್ರಾಮ ಪಂಚಾಯಿತಿ, ಹಾಗೂ ಶ್ರೀ ಶರಣೆಗೌಡ, ಕಿರಿಯ ಅಭಿಯಂತರರು ಇವರು 2ನೇ ಕಾರಣ ಕೇಳುವ ನೋಟೀಸ್ಸಿಗೆ ನೀಡಿರುವ ಹೇಳಿಕೆ ಸಮರ್ಥನೀಯವಲ್ಲವೆಂದು ಕಂಡುಬಂದಿರುವುದರಿಂದ ಸರ್ಕಾರವು ವಿಚಾರಣಾ ವರದಿ ಹಾಗೂ ಸದರಿ ವರದಿಯ ಮೇಲೆ ಮಾನ್ಯ ಉಪಲೋಕಾಯುಕ್ತರ ನಿರ್ಣಯವನ್ನು ಅಂಗೀಕರಿಸಿದೆ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನಂತೆ ಶ್ರೀ ಮುರ್ತುಜಾ ಹುಸೇನಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಯರಗೇರಾ ಗ್ರಾಮ ಪಂಚಾಯಿತಿ, ರಾಯಚೂರು ತಾಲೂಕು ರವರು ದಿನಾಂಕ:30.06.2014 ರಂದು ಸೇವೆಯಿಂದ ವಯೋನಿವೃತ್ತಿ ಹೊಂದಿರುವುದರಿಂದ ಇವರ ನಿವೃತ್ತಿ ವೇತನದ ಶೇಕಡ 30 ರಷ್ಟನ್ನು ಐದು ವ ರ್ಷದ ಅವಧಿಗೆ ಕಡಿತಗೊಳಿಸುವ ಹಾಗೂ ಶ್ರೀ ಶರಣೆಗೌಡ, ಕಿರಿಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು ತಾಲೂಕು ರವರಿಗೆ ಐದು ವಾರ್ಷಿಕ ವೇತನ ಬಡ್ತಿಗಳನ್ನು ಐದು ವರ್ಷಗಳ ಅವಧಿಗೆ ಸಂಚಿತ ಪರಿಣಾಮವಿಲ್ಲದೆ ತಡೆಹಿಡಿಯುವ ದಂಡನೆಯನ್ನು ವಿಧಿಸಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:560:ಗ್ರಾಪಂಕಾ2017 ಬೆಂಗಳೂರು, ದಿನಾಂಕ:06.07.2018.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು, ಶ್ರೀ ಮುರ್ತುಜಾ ಹುಸೇನಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹಾಗೂ ಶ್ರೀ ಶರಣೆಗೌಡ, ಕಿರಿಯ ಅಭಿಯಂತರರು, ಇವರು ಯರಗೇರಾ ಗ್ರಾಮ ಪಂಚಾಯಿತಿಯ 2011ನೇ ಸಾಲಿನ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಎಸ್.ಸಿ/ಎಸ್.ಟಿ ವಾರ್ಡಿನಲ್ಲಿ ಕೈಗೊಂಡ ತಡೆಗೋಡೆ ಕಾಮಗಾರಿಯಲ್ಲಿ ಅವ್ಯವಹಾರ ಎಸಗಿದ ಆರೋಪವು ಸಾಬೀತಾಗಿರುವುದರಿಂದ ಶ್ರೀ ಮುರ್ತುಜಾ ಹುಸೇನಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ನಿವೃತ್ತ) ರವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 214(1)(a)(b) ನಿಯಮದಡಿ ನಿರ್ದಿಷ್ಟಪಡಿಸಿದಂತೆ ಇವರಿಗೆ ನಿವೃತ್ತಿ ವೇತನದ ಶೇಕಡ 30 ರಷ್ಟನ್ನು ಐದು ವರ್ಷದ ಅವಧಿಗೆ ಕಡಿತಗೊಳಿಸುವ ದಂಡನೆ ವಿಧಿಸಿದೆ.

ಶ್ರೀ ಶರಣೆಗೌಡ, ಕಿರಿಯ ಅಭಿಯಂತರರು, ರವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957 ರ ನಿಯಮ 8(iii)ರ ನಿಯಮದಡಿ ನಿರ್ದಿಷ್ಟಪಡಿಸಿದಂತೆ ಸದರಿಯವರಿಗೆ ಐದು ವಾರ್ಷಿಕ ವೇತನ ಬಡ್ತಿಗಳನ್ನು ಐದು ವರ್ಷಗಳ ಅವಧಿಗೆ ಸಂಚಿತ ಪರಿಣಾಮವಿಲ್ಲದೆ ತಡೆಹಿಡಿಯುವ ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
6/7/18
(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.

2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ರಾಯಚೂರು ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ರಾಯಚೂರು ತಾಲೂಕು, ರಾಯಚೂರು ಜಿಲ್ಲೆ.
6. ಶ್ರೀ ಮುರ್ತುಜಾ ಹುಸೇನಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಯರಗೇರಾ ಗ್ರಾಮ ಪಂಚಾಯಿತಿ, ರಾಯಚೂರು ತಾಲೂಕು, ರಾಯಚೂರು ಜಿಲ್ಲೆ.
7. ಶ್ರೀ ಶರಣೆಗೌಡ, ಕಿರಿಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು ತಾಲೂಕು, ರಾಯಚೂರು ಜಿಲ್ಲೆ.
8. ಗಣಕ ಕೋಶ.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.